**ಅ.ದಾವಾ 91/2022** **ಪಿ.ಡಬ್ಲ್ಯೂ- 1**

**ದಿನಾಂಕಃ 23/11/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಪಾಟೀಸವಾಲುಃ- 1 ರಿಂದ 5ನೇ ಪ್ರತಿವಾದಿಗಳ ಪರವಾಗಿ ಶ್ರೀ ಹೆಚ್.ಆರ್.ಜೆ. ವಕೀಲರಿಂದ**

ನಾನು 3 ಸರ್ವೆ ನಂಬರ್ ಗಳಿಗೆ ಸಂಬಂಧಪಟ್ಟಂತೆ ಈ ದಾವೆಯನ್ನು ಹೂಡಿರುತ್ತೇನೆ. ಸದರಿ 3 ಸರ್ವೆ ನಂಬರ್ ಹಿರೇಬೆಳಗುಲಿ ಗ್ರಾಮದ್ದು. ನನ್ನ ಮೃತಪಟ್ಟಿರುವ ಕಾರಣವನ್ನು ನಾನು ಕೇಳಿ ತಿಳಿದುಕೊಂಡಿರುತ್ತೇನೆ. ರಾಮಸ್ವಾಮಿ ಕುಟುಂಬಕ್ಕೆ ನಾನು ಹಿರಿಯ ಮಗ ಎಂದರೆ ಸರಿ. ಯಾವುದೇ ಒಂದು ಹಿಂದೂ ಕುಟುಂಬದಲ್ಲಿ ವ್ಯಕ್ತಿ ಮರಣ ಹೊಂದಿದರೆ ಅವರ ಹಿರಿಯ ಮಗ ಅವರ ಅಂತಿಮ ಕ್ರಿಯೆಯನ್ನು ಮಾಡಬೇಕು ಎಂಬ ಪದ್ಧತಿ ಇದೆ ಎಂದರೆ ಸರಿ. ಆ ರೀತಿ ನೀವು ನಿಮ್ಮ ತಂದೆಯ ಶವಸಂಸ್ಕಾರ ಆಗಲೀ ಅಥವಾ ಬೇರೆ ಅಂತಿಮ ಕ್ರಿಯೆಯನ್ನು ಮಾಡಿದ್ದೀರಾ ಎಂದರೆ ಸಾಕ್ಷಿಯು ನನ್ನ ತಮ್ಮನ ಜೊತೆ ಸೇರಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಆ ರೀತಿ ನನ್ನ ತಮ್ಮನ ಜೊತೆ ಸೇರಿ ನನ್ನ ತಂದೆಯ ಅಂತ್ಯಕ್ರಿಯೆಯನ್ನು ಮಾಡಿರುವುದಕ್ಕೆ ಸಂಬಂಧಪಟ್ಟಂತೆ ಯಾವುದೇ ಭಾವಚಿತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

2. ನನ್ನ ತಮ್ಮನಾದ ಪ್ರಕಾಶ ಮೂರ್ತಿಯವರಿಗೆ ಇಬ್ಬರು ಪತ್ನಿಯರು. ನಾನು ಕೇಳಿದ ಹಾಗೆ ನನ್ನ ತಮ್ಮನ ಹಿರಿಯ ಹೆಂಡತಿಯ ಹೆಸರು ಮಂಜುಳ, 2ನೇ ಯವರು ತಾಯಮ್ಮ. ನಾನು ಹಿರಿಯ ಮಗನಾಗಿದ್ದುಕೊಂಡು ನನ್ನ ತಮ್ಮನ ಮದುವೆಯ ಕಾರ್ಯವನ್ನು ನಾನು ಮಾಡಿರುವುದಿಲ್ಲ. ನನ ತಂದೆಯಾದ ರಾಮಸ್ವಾಮಿಯವರ ಒಡಹುಟ್ಟಿದವರು ನನ್ನ ತಂದೆಯನ್ನು ಒಳಗೊಂಡಂತೆ 5 ಜನ. ಅವರೆಂದರೆ ಹೆಚ್.ಡಿ. ರಾಮಸ್ವಾಮಿ ಅಂದರೆ ನನ್ನ ತಂದೆ, ಹೆಚ್.ಡಿ. ಜವರಯ್ಯ ಅಲಿಯಾಸ್ ಪಾಪಣ್ಣ, ಹೆಚ್.ಡಿ. ದೇವಯ್ಯ, ಹೆಚ್.ಡಿ. ಸುಬ್ಬಯ್ಯ, ಹೆಚ್.ಡಿ. ದೇವರಾಜ್. ನನ್ನ ತಂದೆ ಬದುಕಿದ್ದ ಸಮಯದಲ್ಲಿ ನನ್ನ ತಂದೆ ಹಾಗೂ ಅಣ್ಣತಮ್ಮಂದಿರು ಸೇರಿಕೊಂಡು ದಾವಾನುಸೂಚಿ ಸ್ವತ್ತುಗಳಿಗೆ ಸಂಬಂಧಿಸಿದಂತೆ ವಿಭಾಗ ಮಾಡಿಕೊಂಡಿರುತ್ತಾರೆ. ಆ ರೀತಿ ವಿಭಾಗ ಮಾಡಿಕೊಂಡಿರುತ್ತಾರೆ ಎನ್ನುವುದನ್ನು ತೋರಿಸಲು ಪಂಚಾಯತ್ ಪಾಲುಪಾರಿಕತ್ ಆಗಲೀ ಅಥವಾ ಒಟ್ಟು ಕುಟುಂಬದಲ್ಲಿ ಇದ್ದುದ್ದಕ್ಕೆ ಸಂಬಂಧಿಸಿದಂತೆ ಕೈಬರಹದ ಪಹಣಿಗಳನ್ನು ನ್ಯಾಯಾಲಯಹಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

3. ನಿಮ್ಮ ತಮ್ಮನ ಹಿರಿಯ ಹೆಂಡತಿಯ ಹೆಸರು ರತ್ನಮ್ಮ ಎಂದು ಇದೆ ಎಂದರೆ ಸಾಕ್ಷಿಯು ರತ್ನಮ್ಮನೋ ಅಲಿಯಾಸ್ ಇರಬಹುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಮ್ಮನ ಹಿರಿಯ ಹೆಂಡತಿಯಾದ ರತ್ನಮ್ಮನವರು ಈಗಲೂ ಕೂಡ ಜೀವಂತವಾಗಿ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ.

4. ನನ್ನ ತಮ್ಮನಾದ ಪ್ರಕಾಶ್ ಮೂರ್ತಿಯವರು ಯಾವಾಗ ಮರಣ ಹೊಂದಿರುತ್ತಾರೆ ಎಂಬ ಬಗ್ಗೆ ಮರಣ ಸಮರ್ಥನಾ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ನನ್ನ ತಮ್ಮನಾದ ಪ್ರಕಾಶ್ ಮೂರ್ತಿಯವರು ಮರಣ ಹೊಂದಿರುವ ನಿಖರವಾದ ದಿನಾಂಕ ನನಗೆ ಗೊತ್ತಿಲ್ಲ. ಅವರು ಮರಣ ಹೊಂದಿದಾಗ ನಾನು ಅವರ ಶವ ಸಂಸ್ಕಾರ ಹಾಗೂ ತಿಥಿ ಕಾರ್ಯಗಳಲ್ಲಿ ಭಾಗವಹಿಸಿರುತ್ತೇನೆ ಎಂದು ಸಾಕ್ಷಿಯು ಮುಂದುವರಿದು ನುಡಿಯುತ್ತಾರೆ. ಪ್ರಕಾಶಮೂರ್ತಿಯವರ ಹಿರಿಯ ಪತ್ನಿಯಾದ ರತ್ನಮ್ಮ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಅವರನ್ನು ಪಕ್ಷಗಾರರನ್ನಾಗಿ ಮಾಡಲು ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯು ತೊಂದರೆ ಇರಲಿಲ್ಲ, ಅವರು ಎಲ್ಲಿ ವಾಸವಾಗಿದ್ದಾರೆ ಎಂದು ನಿಖರವಾದ ವಿಳಾಸ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

5. ಸದರಿ ರತ್ನಮ್ಮರವರಿರಗೆ ನಾನು ಕೇಳ್ಪಟ್ಟ ಹಾಗೆ 3 ಜನ ಮಕ್ಕಳು. ಅವರ ಪೈಕಿ ಒಬ್ಬರು ಮರಣ ಹೊಂದಿರುತ್ತಾರೆ ಹಾಗೂ ಇಬ್ಬರು ಬದುಕಿದ್ದಾರೆ ಎಂದು ನಾನು ಕೇಳಿರುತ್ತೇನೆ. ಸದರಿ ರತ್ನಮ್ಮರವರಿಗೆ ಇಬ್ಬರು ಮಕ್ಕಳಿದ್ದು, ಒಬ್ಬ ಮಗ ಸುಮಾರು 2 ವರ್ಷಗಳ ಹಿಂದೆ ಮರಣ ಹೊಂದಿದ್ದು, ಇನ್ನೊಬ್ಬ ಮಗ ಈಗಲೂ ಬದುಕಿದ್ದಾರೆ ಎಂದರೆ ಸಾಕ್ಷಿಯು ನನಗೆ ಸದರಿ ವಿಚಾರ ಗೊತ್ತಿಲ್ಲ ಎಂದು ನುಡಿಯುತ್ತಾರೆ.

6. ನನಗೆ ಇಬ್ಬರು ತಂಗಿಯರು. ನಿಮ್ಮ ಇಬ್ಬರು ತಂಗಿಯರ ಮದುವೆಯ ಸಮಯದಲ್ಲಿ ನೀವು ಸಹಾಯ ಮಾಡಿದ್ದೀರಾ ಎಂದರೆ ಸಾಕ್ಷಿಯು ನನ್ನ ತಂದೆ ಅವರುಗಳ ಮದುವೆ ಸಮಯದಲ್ಲಿ ಯಾರಿಂದಲೂ ಕೂಡ ಸಹಾಯವನ್ನು ಪಡೆದಿಲ್ಲ ಎಂದು ನುಡಿಯುತ್ತಾರೆ. ನೀವು ನಿಮ್ಮ ಮನೆಯಲ್ಲಿ ಹಿರಿಯ ಮಗ ಆಗಿದ್ದರಿಂದ ನಿಮ್ಮ ತಮ್ಮಂದಿರು ಹಾಗೂ ತಂಗಿಯರಿಗೆ ನೀವು ಕರ್ತವ್ಯದಲ್ಲಿದ್ದ ಸಂದರ್ಭದಲ್ಲಿ ಅವರ ವಿದ್ಯಾಭ್ಯಾಸಕ್ಕಾಗಲೀ ಅಥವಾ ಇತರೆ ಮೂಲಭೂತ ಸೌಕರ್ಯ ಸಹಾಯವನ್ನು ಮಾಡಿದ್ದೀರಾ ಎಂದರೆ ಸಾಕ್ಷಿಯು 1987 ರವೆರಗೂ ನನ್ನ ತಂದೆ ಕರ್ತವ್ಯದಲ್ಲಿದ್ದು, 1976ರಿಂದ 1982 ರವರೆಗೂ ನಾನು ನನ್ನ ತಂದೆಗೆ ಪ್ರತಿ ತಿಂಗಳು 150/- ರೂ. ಹಣವನ್ನು ಕಳುಹಿಸಿರುತ್ತೇನೆ ಹಾಗೂ ಕಷ್ಟ ಇದ್ದಾಗ ಸಹಾಯ ಮಾಡಿರುತ್ತೇನೆ

ಎಂದು ನುಡಿಯುತ್ತಾರೆ. ಆ ರೀತಿ 150/- ರೂ. ಹಣವನ್ನು ನನ್ನ ತಂದೆಗೆ ಕಳುಹಿಸುತ್ತಾ ಇದ್ದುದ್ದಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ಇಟ್ಟುಕೊಳ್ಳುವ ಅವಶ್ಯಕತೆ ನನಗೆ ಕಂಡುಬಂದಿಲ್ಲ.

7. 1ನೇ ಪ್ರತಿವಾದಿಗೆ ಬುದ್ಧಿ ಭ್ರಮಣೆ ಎಂದರೆ ಸಾಕ್ಷಿಯು ಅವರು 1ನೇ ಪ್ರತಿವಾದಿ ಜನನವಾದಾಗಿನಿಂದಲೂ ಅವರಿಗೆ ಮಾತು ಬರುವುದಿಲ್ಲ ಹಾಗೂ ಬುದ್ಧಿಮಾಂಧ್ಯರು ಎಂದು ನುಡಿಯುತ್ತಾರೆ. ನೀವು 1ನೇ ಪ್ರತಿವಾದಿಯ ಚಿಕಿತ್ಸೆಗೆ ಹಣಕಾಸಿನ ಸಹಾಯವನ್ನು ಮಾಡಿದ್ದೀರಾ ಎಂದರೆ ಸಾಕ್ಷಿಯು ನಾನು ಅವರಿಗೆ ಚಿಕಿತ್ಸೆಯನ್ನು ಕೊಡಿಸಲು ತಯಾರಾಗಿದ್ದೆನು ಆದರೆ ಅವರು ಕಳುಹಿಸಲಿಲ್ಲ ಎಂದು ನುಡಿಯುತ್ತಾರೆ. ನಾನು ಆ ರೀತಿ ಅವರಿಗೆ ಚಿಕಿತ್ಸೆಯನ್ನು ಕೊಡಿಸಲೆಂದು ಈ ದಾವೆಯನ್ನು ಸಲ್ಲಿಸಿದ ನಂತರ ಕರೆಯಲು ಹೋಗಿದ್ದೆ.

8. ನನ್ನ ತಂದೆ ಹುದ್ದೆಯಯಲ್ಲಿದ್ದುದ್ದರಿಂದ ಹಾಗೂ ನನ್ನ ತಮ್ಮಂದಿರು ಒಟ್ಟು ಕುಟಂಬದಲ್ಲಿ ದುಡಿದು ನನಗೆ ಮೈಸೂರಿನ ವಿಶ್ವ ವಿದ್ಯಾನಿಲಯದಲ್ಲಿ ಎಂ.ಎ ಪದವಿಯನ್ನು ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ಆ ರೀರಿ ಅವರು ಎಂ.ಎ ಪದವಿಯನ್ನು ಓದಿಸಿದ ನಂತರ ನನಗೆ ಸಿಂಡಿಕೇಟ್ ಬ್ಯಾಂಕ್ ನಲ್ಲಿ ಕೆಲಸ ದೊರೆತಿರುವುದು ಎಂದರೆ ಸರಿಯಲ್ಲ. ಆ ರೀತಿ ಕೆಲಸ ಸಿಕ್ಕಿದ ನಂತರ ನನ್ನ ತಂದೆ-ತಾಯಿ, ತಮ್ಮಂದಿರು ಹಾಗೂ ತಂಗಿಯರಿಗೆ ಯಾವುದೇ ರೀತಿ ಸಹಾಯಾ ಮಾಡದೇ ಒಬ್ಬಂಟಿಯಾಗಿ ಜಿವನಂ ಮಾಡಲುಪ್ರಾರಂಭಿಸಿರುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ಕೆಲಸ ಸಿಕ್ಕಿದ ನಂತರ ನಾನು ನನಗೆ ಆಸ್ತಿಯಲ್ಲಿ ಯಾವುದೇ ಹಿಸ್ಸೆ ಬೇಡ ಎಂದು ನನ್ನ ತಂದೆ-ತಾಯಿ ಹಾಗೂ ತಮ್ಮಂದಿರಿಗೆ ಮೌಖಿಕವಾಗಿ ತಿಳಿಸಿದ್ದೆನು ಎಂದರ ಸರಿಯಲ್ಲ. ಆ ರೀತಿ ಕೆಲಸ ಸಿಕ್ಕಿದ ನಂತರ ಬೇಲೂರಿನ ಮಾಜಿ ಶಾಸಕರಾದ ಪುಟ್ಟರಂಗನಾಥರವರ ಸಹೋದರಿಯನ್ನು ನನ್ನ ತಂದೆ-ತಾಯಿ ಹಾಗೂ ತಮ್ಮಂದಿರು ನಿಂತು ನನಗೆ ಮದುವೆ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಮದುವೆಯಾದ ನಂತರ ನಾನು ನನಗೆ ಒಟ್ಟು ಕುಟುಂಬ ಆಸ್ತಿಯಲ್ಲಿ ಯಾವುದೇ ಪಾಲು ಬೇಡ ಎಂದು ಹೇಳಿ ಕೆಲಸವನ್ನು ತೆಗೆದುಕೊಂಡು ನಾನು ಹಾಗೂ ನನ್ನ ಸಂಸಾರದೊಂದಿಗೆ ಪ್ರತ್ಯೇಕವಾಗಿ ವಾಸವಾಗಿದ್ದೆನು ಎಂದರೆ ಸರಿಯಲ್ಲ.

9. ದಾವಾನುಸೂಚಿ ಸ್ವತ್ತುಗಳನ್ನು ಹೊರತುಪಡಿಸಿ ಹಿರೇಬೆಳಗುಳಿ ಗ್ರಾಮದಲ್ಲಿ ಇದ್ದ ಪಿತ್ರಾರ್ಜಿತವಾಗಿ ಬಂದಿದ್ದ ಮನೆಯನ್ನು ಮಾರಾಟ ಮಾಡಿ ನಾನು ಹಾಗೂ ನನ್ನ ಪತ್ನಿ ಪ್ರತ್ಯೇಕವಾಗಿ ವಾಸವಾಗಿದ್ದೇವೆ ಎಂದರೆ ಸರಿಯಲ್ಲ. ಆ ರೀತಿ ನಾನು ಸದರಿ ಮನೆಯನ್ನು ಮಾರಾಟ ಮಾಡಿರುವುದರಿಂದ ಒಟ್ಟು ಕುಟುಂಬದ

ಕಂದಾಯ ಪಾವತಿಸುವ ಸರ್ವೆ ನಂಬರ್ ಜಮೀನುಗಳನ್ನು ಮಾತ್ರ ಈ ದಾವೆಯಲ್ಲಿ ಸೇರಿಸಲಾಗಿದೆ ಎಂದರೆ ಸರಿಯಲ್ಲ. ಸದರಿ ಮನೆಯನ್ನು ನಾನು ಮಾರಾಟ ಮಾಡಿರುವುದರಿಂದ ಸತ್ಯಾಂಶ ತಿಳಿಯುತ್ತದೆ ಎಂದು ಸದರಿ ಒಟ್ಟು ಕುಟುಂಬದಲ್ಲಿ ಪಿತ್ರಾರ್ಜಿತವಾಗಿ ಬಂದ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನನ್ನ ಅಜ್ಜನ ಒಂದು ಮನೆ ಇದ್ದು ಅದರಲ್ಲಿ ನನ್ನ ಸ್ವಂತ ಚಿಕ್ಕಪ್ಪ ವಾಸವಾಗಿದ್ದು ಈಗಲೂ ಅವರ ಪತ್ನಿ ಅದರಲ್ಲಿ ವಾಸವಾಗಿದ್ದಾರೆ ಆದ್ದರಿಂದ ನಾನು ಅದನ್ನು ಈ ದಾವೆಯಲ್ಲಿ ಸೇರಿಸಲು ಇಚ್ಛಿಸಿಲ್ಲ ಎಂದು ನುಡಿಯುತ್ತಾರೆ.

10. ನಾನು ಸಿಂಡಿಕೇಟ್ ಬ್ಯಾಂಕಿನಲ್ಲಿ ಕರ್ತವ್ಯದಲ್ಲಿದ್ದಾಗ ಸರಿಯಾಗಿ ಕರ್ತವ್ಯ ನಿರ್ವಹಿಸಿಲ್ಲ ಎಂದು ನನ್ನನ್ನು Suspend ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನನ್ನು ಸದರಿ ಬ್ಯಾಂಕಿಗೆ ಮರು ನೇಮಕಾತಿ ಮಾಡಲು ನನ್ನ ತಂದೆ ಹಾಗೂ ತಮ್ಮಂದಿರು 10ಕ್ಷ ರೂ. ಗಳನ್ನು ಅವರಿಗೆ ಬಂದ ಆದಾಯದಿಂದ ನೀಡಿರುತ್ತಾರೆ ಎಂದರೆ ಸರಿಯಲ್ಲ. 6ನೇ ಪ್ರತಿವಾದಿ ಕೂಡ ಶಿಕ್ಷಕಿಯಾಗಿದ್ದು, ಅವರಿಗೆ ಬಂದ ಸಂಬಳವನ್ನು ಕೂಡ ಸೇರಿಸಿ ನನಗೆ ಬ್ಯಾಂಕಿಗೆ ಮರು ನೇಮಕ ಮಾಡಿಕೊಳ್ಳಲು ಹಣವನ್ನು ನೀಡಿದ್ದರು ಎಂದರೆ ಸರಿಯಲ್ಲ. ನನಗೆ ದಾವಾನುಸೂಚಿ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಅಥವಾ ಹಿತಾಸಕ್ತಿ ಇಲ್ಲದೇ ಇದ್ದರೂ ಕೂಡ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

11. ನಿ.ಪಿ 1ನ್ನು ಸಾಕ್ಷಿಗೆ ತೋರಿಸಿ ಪ್ರಕಾಶ್ ಮೂರ್ತಿಯವರಿಗೆ ರತ್ನಮ್ಮ ಹಾಗೂ ತಾಯಮ್ಮ ಎಂದು ಇಬ್ಬರು ಪತ್ನಿಯರು ಎಂದು ತೋರಿಸಲಾಗಿದೆಯೇ ಎಂದರೆ ಸಾಕ್ಷಿಯು ರತ್ನಮ್ಮ ಎಂದು ತೋರಿಸಿಲ್ಲ, ತಾಯಮ್ಮ ಹಾಗೂ ಮಂಜುಳ ಎಂದು ತೋರಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿ.ಪಿ 1ರಲ್ಲಿ ಪ್ರಕಾಶ ಮೂರ್ತಿಯವರು ಕಾನೂನುಬದ್ಧ ವಾರಸುದಾರರಾದ ಪತ್ನಿಯರು ಹಾಗೂ ಮಕ್ಕಳನ್ನು ತೋರಿಸಲಾಗಿದೆಯೇ ಎಂದರೆ ಸಾಕ್ಷಿಯು ಪ್ರಕಾಶ್ ಮೂರ್ತಿಯವರಿಗೆ ಇಬ್ಬರು ಪತ್ನಿಯರು ಎಂದು ತೋರಿಸುತ್ತೇನೆ ಅವರನ್ನು ಹೊರತುಪಡಿಸಿ ಬೇರೆ ಯಾರನ್ನೂ ತೋರಿಸಿಲ್ಲ ಎಂದು ನುಡಿಯುತ್ತಾರೆ. ನಾನು ನಮ್ಮ ಕುಟುಂಬಕ್ಕೆ ಸಂಬಂಧಪಟ್ಟಂತೆ ವಂಶವೃಕ್ಷ ಪಡೆದುಕೊಳ್ಳಲು ಸಂಬಂಧಪಟ್ಟ ತಾಲ್ಲೂಕು ಕಛೇರಿಗೆ ಅರ್ಜಿ ನೀಡಿದ ಬಗ್ಗೆ ಅಥವಾ ಅದಕ್ಕೆ ಸಂಬಂಧಪಟ್ಟ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

12. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಾನು ಹಿರೇಬೆಳಗುಳಿ ಗ್ರಾಮದಲ್ಲಿ ವಾಸವಾಗಿರುವುದಾಗಿ ಇರುತ್ತದೆ. ನಾನು ಹಿರೇಬೆಳಗುಳಿ ಗ್ರಾಮದಲ್ಲಿ 20-23 ವರ್ಷ ವಾಸವಾಗಿರುತ್ತೇನೆ. ನಾನು ಅಷ್ಟೂ ವರ್ಷಗಳಷ್ಟು ಸಮಯ ಹಿರೇಬೆಳಗುಳಿ ಗ್ರಾಮದಲ್ಲಿ ವಾಸವಾಗಿದ್ದೆ ಎಂದು ತೋರಿಸಲು ಚುನಾವಣಾ ಗುರುತಿನ ಚೀಟಿಯಾಗಲೀ, ಆಧಾರ್ ಕಾರ್ಡ್, ಪಡಿತರ ಚೀಟಿ ಅಥವಾ ವಾಸಸ್ಥಳ ದೃಢೀಕರಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ಹಿರೇಬೆಳಗುಳಿ ಗ್ರಾಮದಲ್ಲಿ ಅಷ್ಟು ವರ್ಷ ವಾಸವಾಗಿದ್ದೆ ಎನ್ನುವುದಕ್ಕೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ಸಿಂಡಿಕೇಟ್ ಬ್ಯಾಂಕ್ ನಲ್ಲಿ ಕರ್ತವ್ಯದಲ್ಲಿದ್ದು, ಸಸ್ಪೆಂಡ್ ಆಗಿ ವಾಪಸ್ಸು ಕರ್ತವ್ಯಕ್ಕೆ ಹೋದ ನಂತರ ಕಾನೂನು ಪ್ರಕಾರ ಪ್ರಕರಣಗಳು ದಾಖಲಾಗಿದ್ದರಿಂದ ನಾನು ಸದರಿ ಕರ್ತವ್ಯಕ್ಕೆ ರಾಜೀನಾಮೆ ಕೊಟ್ಟು ಬಂದಿರುತ್ತೇನೆ ಎಂದರೆ ಸರಿಯಲ್ಲ.

13. ನನಗೆ ಈಗ 71 ವರ್ಷ ವಯಸ್ಸು. ನಾನು ಹಿರೇಬೆಳಗುಳಿ ಗ್ರಾಮದಲ್ಲಿ ನನ್ನ ಬಾಲ್ಯದಲ್ಲಾಗಲೀ ನಂತರ ಯಾವತ್ತು ಕೂಡ ವಾಸ ಇರಲಿಲ್ಲ, ನನಗೆ ವಯಸ್ಸಾದ ಸಮಯದಲ್ಲಿ ನನ್ನ ತಮ್ಮಂದಿರು ಹಾಗೂ ತಂಗಿಯರಿಂದ ಆಸ್ತಿಯನ್ನು ಪಾಲು ಪಡೆಯಬೇಕು ಎಂಬ ಉದ್ದೇಶದಿಂದ ನಾನು ಸದರಿ ಗ್ರಾಮದಲ್ಲಿ ವಾಸವಾಗಿದ್ದೆ ಎಂದು ಹೇಳಲು ಯಾವುದೇ ದಾಖಲೆಗಳನ್ನು ಹಾಜರುಪಡಿಸದೇ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾನುಸೂಚಿ ಸ್ವತ್ತುಗಳ ಸರ್ವೆ ನಂಬರ್, ಚೆಕ್ಕುಬಂದಿ ಹಾಗೂ ಸದರಿ ಸ್ವತ್ತುಗಳು ಎಲ್ಲಿ ಇವೆ ಎಂಬುದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಕಂದಾಯ ಅಧಿಕಾರಿಗಳೊಂದಿಗೆ ಷರಿಕ್ಕಾಗಿ ಸುಳ್ಳು ದಾಖಲೆಗಳನ್ನು ಪಡೆದುಕೊಂಡು ದಾವಾನುಸೂಚಿ ಸ್ವತ್ತುಗಳಲ್ಲಿ ನನಗೆ ಹಿಸ್ಸೆಯ ಹಕ್ಕು ಇದೆ ಎಂದು ಈ ಇಳಿ ವಯಸ್ಸಿನಲ್ಲಿ ಬಂದಿರುವುದು ಕಾನೂನು ಬಾಹಿರ ಎಂದರೆ ಸರಿಯಲ್ಲ. ನಾನು ಹಿರಿಯ ಮಗನಾದ ಇದ್ದುಕೊಂಡು ನನ್ನ ತಂದೆಯ ಶವಸಂಸ್ಕಾರ ಅಥವಾ ಯಾವುದೇ ಅಂತಿಮ ಕಾರ್ಯಗಳನ್ನು ಮಾಡಿಲ್ಲ ಎಂದರೆ ಸರಿಯಲ್ಲ.

14. ನನ್ನ ತಂದೆಗೆ ಪಿತ್ರಾರ್ಜಿತವಾಗಿ ಬಂದ ಒಟ್ಟು ಆಸ್ತಿಯ ವಿಸ್ತೀರ್ಣ 2 ಎಕರೆ 10 ಗುಂಟೆ. ಪ್ರತಿವಾದಿಯರು ದಾವಾನುಸೂಚಿ ಸ್ವತ್ತಿನ ಸ್ವಾಧೀನವನ್ನು ಹೊಂದಿಕೊಂಡು ಬರುತ್ತಿದ್ದು, ನಾನು ಕಂದಾಯ ಅಧಿಕಾರಿಗಳೊಂದಿಗೆ ಷರಿಕ್ಕಾಗಿ ಪ್ರತಿವಾದಿಯರು ಸ್ವಾಧೀನದಲ್ಲಿರುವ ಸ್ವತ್ತನ್ನು ಲಪಟಾಯಿಸಬೇಕೆಂಬ ಉದ್ದೇಶದಿಂದ ದಾವಾನುಸೂಚಿ ಸ್ವತ್ತುಗಳಲ್ಲಿ ನನಗೆ ಹಿಸ್ಸೆ ಇದೆ ಎಂದು ಈ ಸುಳ್ಳು ದಾವೆಯನ್ನು

ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸದರಿ 2 ಎಕರೆ 10 ಗುಂಟೆ ಸ್ವತ್ತನ್ನು ನೋಡಿಯೇ ಇಲ್ಲ ಹಾಗೂ ಅದರ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸ.ಇ.

ಜೆ.ಎಂ.ಎಫ್.ಸಿ., ಹೊಳೆನರಸೀಪುರ.